<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

S.C. 98/2023

PW- 18

CW- 35

ಪ್ರ. ಬೋ. ದಿನಾಂಕಃ 12-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಸತೀಶ ನಾಯ್ಕು |
| ತಂದೆ/ ಗಂಡನ ಹೆಸರು | : | ಸಿಕ್ಯಾನಾಯ್ಕು |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಸಹಾಯಕ ಇಂಜಿನಿಯರ್ , ಪಿ ಡಬ್ಲ್ಯೂ ಡಿ |
| ವಾಸ | : | ದಾವಣಗೆರೆ |

<u>ಮುಖ್ಯ ವಿಚಾರಣೆಃ-</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಹರಿಹರ ನಗರದಲ್ಲಿ ದಿ. 09.12.2022 ರಿಂದ ದಿ. 30.08.2024 ರವರೆಗೆ ಸಹಾಯಕ ಇಂಜಿನಿಯರ್ , ಪಿ ಡಬ್ಲ್ಯೂ ಡಿ ಕೆಲಸ ನಿರ್ವಹಿಸುತ್ತಿದ್ದೆ.

ಹರಿಹರ ನಗರ ಪೊಲೀಸ್ ಠಾಣಾಧಿಕಾರಿ ದಿ. 20.05.2023 ರಂದು ಕೃತ್ಯ ಸಂಬಂಧಪಟ್ಟ ನಕ್ಷೆಯನ್ನು ತಯಾರು ಮಾಡಿಕೊಡುವಂತೆ ಮನವಿ ಪತ್ರವನ್ನು ಕೊಟ್ಟರು. ಸದರಿ ಮನವಿ ಪತ್ರವನ್ನು ಸ್ವೀಕರಿಸಿದ ನಂತರ ತಿಪ್ಪೇಸ್ವಾಮಿ ಎನ್ನುವವರು ದಿ. 13.06.2023 ರಂದು ಸದರಿ ಕೃತ್ಯ ನಡೆದ ಸ್ಥಳ ವನ್ನು ತೋರಿಸಿದ್ದು ಆ ಸ್ಥಳ ವನ್ನು ಪರಿಶೀಲನೆ ಮಾಡಿ ನಕ್ಷೆಯನ್ನು ತಯಾರು ಮಾಡಿಕೊಟ್ಟಿದ್ದು ಸದರಿ ನಕ್ಷೆ ನೋಡುತ್ತಿದ್ದು ನಿಪಿ 47 ಎಂದು , ಪೊಲೀಸ್) ಅಧಿಕಾರಿಗಳವರು ಕಳುಹಿಸಿಕೊಟ್ಟ ಪತ್ರವನ್ನು ನಿಪಿ 48 ಎಂದು ಗುರುತಿಸಲಾಯಿತು. ನಿಪಿ 47 ನಕ್ಷೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ರುಜು ನಿಪಿ 47(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:-</u> ಆರೋಪಿತರಪರ ಶ್ರೀ ವಕೀಲರಿಂದ.

ನಕ್ಷೆ ತಯಾರಿಸಿದವರ ಹೆಸರು ಅಂತಾ ನನ್ನ ಹೆಸರು ಬೆರಳಚ್ಚು ಮಾಡಿದ್ದು , ಆದರೆ ಆ ಸ್ಥಳ ದಲ್ಲಿ ನಾನು ರುಜು ಮಾಡಿರುವುದಿಲ್ಲ. ನಕ್ಷೆಯ ಎಡ ಭಾಗದಲ್ಲಿ ನಾನು ರುಜು ಮಾಡಿರುತ್ತೇನೆ. ಸದರಿ ಸಹಿಯ ಕೆಳಗಡೆ ನನ್ನ ಹೆಸರು ಇರುವುದಿಲ್ಲ ಹಾಗೂ ಯಾವುದೇ ಬರವಣಿಗೆ ಸಹಿತ ಇರುವುದಿಲ್ಲ. ಖಾಲಿ ಪೇಪರ್ ಮೇಲೆ ಸಹಿ ಪಡೆದುಕೊಂಡು ಪ್ರಿಂಟ್ ನ್ನು ತೆಗೆದುಕೊಂಡು ನಂತರ ಸಹಿ ಮಾಡಿದ ರೀತಿಯಲ್ಲಿ ಕಾಣುತ್ತಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಕೆ ಎನ್ ತಿಪ್ಪೇಸ್ವಾಮಿ ಸ್ಥಳ ತೋರಿಸಿದವರು ರುಜು ಮಾಡಿರುವುದಿಲ್ಲ. ಸದರಿ ನಕ್ಷೆಯನ್ನು ಪೊಲೀಸರೇ ಬಂದು ತೆಗೆದುಕೊಂಡು ಹೋಗಿರುತ್ತಾರೆ. ನಾನು ಸ್ಥಳ ಕ್ಕೆ ಭೇಟಿ ಲಕೊಟ್ಟಿಲ್ಲ ಸ್ಥಳ ದಲ್ಲಿ ನಿಪಿ 47 ನಕ್ಷೆ ತಯಾರು ಮಾಡಿಲ್ಲ , ನಾನು ಖಾಲಿ ಪೇಪರ್ ಗೆ ಸಹಿ ಮಾಡಿ ಕೊಟ್ಟಿದ್ದು ಆ ಖಾಲಿ ಪೇಪರ್ ಮೇಲೆ ಪೊಲೀಸರು ನಿಪಿ 47 ನ್ನು ನಕ್ಷೆ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಕ್ಷೆ ತಯಾರಿಸಿದ ಹೆಸರು ಅಂತಾ ನನ್ನ ಹೆಸರು ಬೆರಳಚ್ಚು ಮಾಡಿದ್ದು ಆ ಸ್ಥಳ ದಲ್ಲಿ ನನಗೆ ಸಹಿ ಮಾಡಲು ಯಾವುದೇ ರೀತಿ ತೊಂದರೆ ಇರಲಿಲ್ಲ.

<u>ಮರುವಿಚಾರಣೆ</u>:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.